# ಜೈಲುವಾಸ ತಪ್ಪಿಸಿದ ರಂಗ ಸಹವಾಸ

ಮನೋಹರ್ ಗೌಡ
ಕಾಮಿಡಿ ಕಿಲಾಡಿಗಳು ನಟ



**◆ ಕೋಳಿ ಕಳ್ಳ ಅಂತ ಯಾಕೆ ಕರೀತಾರೆ?**

ನನ್ನ ಹೆಸರು ಮನೋಹರ್. ಆತ್ಮೀಯವಾಗಿ ಮನು ಎನ್ನುತ್ತಾರೆ. ‘ಕೋಳಿ ಕಳ್ಳ’ ಅಂತ ಕೆಲವರು ಕರೀತಾರೆ. ಯಾಕೆ ಅಂದರೆ ಹುಡುಗಿಯರು ಫ್ಯಾನ್ಸ್ ಹೆಚ್ಚು ಇದ್ದಾರೆ. ಅವರ ಪ್ರಕಾರ ಕೋಳಿ ಅಂದ್ರೆ ಹುಡುಗಿ ಅಂತ ಅರ್ಥ. ಅದಕ್ಕಾಗಿ ಹಾಗೆ ರೇಗಿಸುತ್ತಾರೆ, ಕಾಮಿಡಿ ಕಂಟೆಂಟ್ ಅಷ್ಟೇ. ನಾನೇನು ಹೆಚ್ಚು ಕಾಳು ಹಾಕ್ತೀನಿ ಅಂತ ಅಲ್ಲ. ಕೆಲವು ಆಕರ್ಷಣೆಗಳು ಆಗಿವೆ. ಅವು ಯಾವುದೂ ವಾಸ್ತವ ಅಲ್ಲ. ಈಗ ನನಗೆ ಜೀವನದಲ್ಲಿ ಸಾಧಿಸಬೇಕು ಎನ್ನುವುದು ಮುಖ್ಯ.

**◆ ನಟ ಆಗಬೇಕೆಂಬ ಆಸೆ ಹುಟ್ಟಿದ್ದು ಹೇಗೆ?**

ಮಂಡ್ಯ ಜಿಲ್ಲೆ ಕೆ.ಆರ್. ಪೇಟೆ ತಾಲ್ಲೂಕು ಮಡುವಿನಕೋಡಿ ನಮ್ಮ ಮೂಲ. ಕೆ.ಆರ್. ಪೇಟೆಗೆ ಬಂದು ನೆಲೆಸಿದೆವು. ಅಲ್ಲಿ ದೊಡ್ಡ ಪೋಲಿ ಆಗಿದ್ದೆ. ಪಿಯುಸಿಯಲ್ಲಿ ಜೀವಶಾಸ್ತ್ರದಲ್ಲಿ ಫೇಲ್ ಆಗಿದ್ದೆ. ನಂತರ ಡಿಪ್ಲೋಮಾ ಕಂಪ್ಯೂಟರ್ ಸೈನ್ಸ್‌ಗೆ ಸೇರಿದೆ. ಅಷ್ಟರಲ್ಲಾಗಲೇ ಊರಲ್ಲಿ ತಂಟೆ ತಕರಾರುಗಳಿಗೆ ನಿಂತಿದ್ದೆ. ಅದಕ್ಕಾಗಿ ಪೊಲೀಸರು ಸುಮಾರು ಬಾರಿ ಗೂಸಾ ಕೊಟ್ಟಿದ್ದಾರೆ. ಊರ ಜನ ನಮ್ಮ ಗುಂಪನ್ನು ವಿಲನ್ ರೀತಿ ನೋಡುತ್ತಿದ್ದರು. ನನ್ನ ಜೊತೆ ಚಿಕ್ಕಮಕ್ಕಳು ಬಂದರೆ ಅವರ ಮನೆಯವರು ಅವನ ಜೊತೆ ಹೋಗಬೇಡ ಎಂದು ಬುದ್ಧಿ ಹೇಳುವಷ್ಟು ದುಷ್ಟ ಪಟ್ಟ ಅಂಟಿಕೊಂಡಿತ್ತು. ನಮ್ಮ ಕಾಲೇಜಿನಲ್ಲಿ ಸಾಂಸ್ಕೃತಿಕ ಚಟುವಟಿಕೆಯಲ್ಲಿ ಸಿವಿಲ್ ಮತ್ತು ಮೆಕಾನಿಕಲ್ ವಿಭಾಗದವರ ಮೇಲುಗೈ ಇತ್ತು. ಕಂಪ್ಯೂಟರ್ ಸೈನ್ಸ್ ಯಾರೂ ಕೇಳುವವರೇ ಇರಲಿಲ್ಲ. ನಮ್ಮ ವಿಭಾಗದಲ್ಲಿ ಹುಡುಗಿಯರೇ ಹೆಚ್ಚು. ಆ ಸಮಯದಲ್ಲಿ ಏನಾದರೂ ಮಾಡಬೇಕು ಎನ್ನುವ ಬಯಕೆ ನನ್ನಲ್ಲಿ ಹುಟ್ಟಿತು. ನನ್ನ ಗೆಳೆಯ ವೇಣುಗೋಪಾಲ್ ಸ್ವಾಮಿ ಜೊತೆ ಸೇರಿ ಒಂದು ಸ್ಕಿಟ್ ಮಾಡಿದೆ. ಆಗ ನಿತ್ಯಾನಂದ ಸ್ವಾಮೀಜಿ ಸುದ್ದಿಯಲ್ಲಿದ್ದರು. ಆ ಪಾತ್ರವನ್ನು ಇಟ್ಟುಕೊಂಡು ಕಲ್ಪನೆಯ ಕಥೆಯನ್ನು ಹೊಸೆದಿದ್ದೆವು. ಅದಕ್ಕೇ ಮೊದಲ ಬಹುಮಾನ ಬಂದಿತ್ತು. ಅಲ್ಲಿ ಬೀಜಾಂಕುರವಾದ ನಟನೆ ಮೈಸೂರಿನ ಮಹಾಜನಸ್ ಕಾಲೇಜಿನಲ್ಲಿ ಬೆಳೆಯಿತು.

**◆ ರಂಗ ಅಭಿರುಚಿ ಬೆಳೆದಿದ್ದು ಹೇಗೆ?**

ಮಹಾಜನಸ್‌ನಲ್ಲಿ ಬಿ.ಎಸ್ಸಿಗೆ ಸೇರಿದೆ. ಕಾಲೇಜಿಗೆ ಸೇರಿದ ಹೊಸತರಲ್ಲೇ ‘ವಾಲಂಟಿಯರ್ ಆಫ್ ಮಹಾಜನ್’ ತಂಡಕ್ಕೆ ನನ್ನನ್ನು ಸೇರಿಸಿದರು. ಕ್ವಾಟ್ಲೆ ಮಾಡುವವರನ್ನು ನಿಯಂತ್ರಿಸುವ ಕೆಲಸ. ಅದು ಒಂದು ರೀತಿಯಲ್ಲಿ ಕಳ್ಳನ ಕೈಯಲ್ಲಿ ಕೀ ಕೊಟ್ಟ ಹಾಗಿತ್ತು. ತುಂಟರ ಮೇಲೆ ಕಣ್ಣಿಟ್ಟು ಕಾಯುವ ಕೆಲಸ ನಿಧಾನಕ್ಕೆ ಬದಲಾವಣೆಯನ್ನು ತಂದಿತು. ನಂತರ ಕಾಲೇಜಿನ ‘ಸಾಂಸ್ಕೃತಿಕ ರಂಗ ತಂಡ’ದ (ಸಾರಂತ) ಸದಸ್ಯನಾದೆ. ಆ ತಂಡದ ಅನೇಕರು ಇವತ್ತು ಸೆಲೆಬ್ರಿಟಿಗಳಾಗಿದ್ದಾರೆ. ನಟ ಯಶ್ ಕೂಡ ಅಲ್ಲಿ ನಮ್ಮ ಹಿರಿಯರಾಗಿದ್ದರು. ನನ್ನ ಜೊತೆ ನಟ ಶಟಮರ್ಷನ್ ಅವಿನಾಶ್, ಕೆಜಿಎಫ್ ಗಾಯಕಿ ಅನನ್ಯ ಭಟ್, ಬಿಗ್‌ಬಾಸ್‌ನ ನಿವೇದಿತಾ ಗೌಡ ಸೇರಿದಂತೆ ಅನೇಕರು ಆ ತಂಡದಲ್ಲಿದ್ದರು. ಕಾಲೇಜು ಹಾಜರಾತಿಗೆ ವಿನಾಯಿತಿ ಸಿಗುತ್ತದೆ ಎಂದು ಅಲ್ಲಿಗೆ ಸೇರಿದ್ದೆ.

ಅಲ್ಲಿನ ಮೊದಲ ನಾಟಕದಲ್ಲಿ ಸಣ್ಣ ಪಾತ್ರ ಕೊಟ್ಟಿದ್ದರು. ನಾಟಕ ಪ್ರದರ್ಶನದ ಮುನ್ನ ತಾಲೀಮಿನ ದಿನ ಒಬ್ಬ ಪಾತ್ರಧಾರಿ ಬಂದಿರಲಿಲ್ಲ. ಆ ಜಾಗಕ್ಕೆ ಸುಮ್ಮನೆ ನನ್ನನ್ನು ನಿರ್ದೇಶಕರು ನಿಲ್ಲಿಸಿದ್ದರು. ನಾನು ಡೈಲಾಗ್ ಕೂಡ ಸರಿಯಾಗಿ ಹೇಳಿದೆ. ನೀನೇ ಚೆನ್ನಾಗಿ ಮಾಡ್ತೀಯಾ ಅಂತ ಅದೇ ಪಾತ್ರ ಕೊಟ್ಟರು. ಕಾಲೇಜು ರಂಗೋತ್ಸವದಲ್ಲಿ ನನ್ನ ಪಾತ್ರ ಹಿಟ್ ಆಯಿತು. ಅದರಿಂದ ಮೈಸೂರಿನ ಮತ್ತೊಂದು ಹವ್ಯಾಸಿ ರಂಗ ತಂಡಕ್ಕೆ ಪ್ರವೇಶಿಸಲು ವೇದಿಕೆ ಆಯಿತು. ಅಲ್ಲಿ ಮುಂಬೈ ಕರ್ನಾಟಕ ಸಂಘದ ನಾಟಕ ಸ್ಪರ್ಧೆಗೆ ನನಗೆ ಪ್ರಮುಖಪಾತ್ರ ಕೊಟ್ಟರು. ಬಳ್ಳಾರಿಯ ‘ರಂಗತೋರಣ’ ಏರ್ಪಡಿಸುವ ನಾಟಕ ಸ್ಪರ್ಧೆಗೆ ಒಂದು ನಾಟಕ ತೆಗೆದುಕೊಂಡುಹೋಗಬೇಕಿತ್ತು. ಆ ವರ್ಷ ನಿರ್ದೇಶಕರು ಯಾರೂ ಸಿಗದ ಕಾರಣ, ನಾನೇ ಮಾಡಿದೆ. ಅದಕ್ಕೆ ಬೆಸ್ಟ್ ನಿರ್ದೇಶನ ಅವಾರ್ಡ್ ಸಿಕ್ಕಿತು. ನಂತರ ಮತ್ತೊಮ್ಮೆ ಅದೇ ಬಳ್ಳಾರಿಗೆ ನಟನಾಗಿ ಹೋಗಿದ್ದೆ. ಆಗ ಒಳ್ಳೆಯ ಪೋಷಕ ನಟ ಎಂಬ ಪುರಸ್ಕಾರ ಸಿಕ್ಕಿತು. ‘ನೀನಾಸಂ’, ‘ಸಾಣೆಹಳ್ಳಿ’ ರಂಗತಂಡಗಳು ಸೇರಿದಂತೆ ಸುಮಾರು 25 ತಂಡಗಳು ಸ್ಪರ್ಧೆಗೆ ಬರುತ್ತವೆ. ಈ ಗೆಲುವು ಮತ್ತು ಒಳಗೊಳ್ಳುವಿಕೆ ನನ್ನಲ್ಲಿ ಕಲಾಭಿರುಚಿಯನ್ನು ಬೆಳೆಸಿತು.

**◆ ನಟನಾಗದಿದ್ದರೆ ನೀವೇನು ಮಾಡ್ತಿದ್ರಿ?**

ಜೈಲಿಗೆ ಹೋಗಿರುತ್ತಿದ್ದೆ. ಅದೇ ಭಯದಲ್ಲಿ ನಾನು ನಟನಾಗಿ ಹೊರಗುಳಿದಿದ್ದೇನೆ. ಕೆ.ಆರ್. ನಗರದಲ್ಲಿ ಪುಂಡಾಟಿಕೆಯೇ ನಿತ್ಯದ ಕಾಯಕ ಆಗಿತ್ತು. ಪೊಲೀಸರು ಸುಮಾರು ಬಾರಿ ಠಾಣೆಗೆ ಕರೆದುಕೊಂಡು ಹೋಗಿದ್ದಾರೆ. ಒಮ್ಮೆ ಮನೆಯಲ್ಲಿ ‘ಸ್ವಲ್ಪ ದಿನ ಜೈಲಲ್ಲಿ ಇರಲಿ’ ಎಂದು ಸುಮ್ಮನಿದ್ದರು. ನನ್ನ ಮೇಲೆ ಗುರುತರ ದೂರು ಇರಲಿಲ್ಲ. ಸಮಾಜದ ಶಾಂತಿ ಕದಡುತ್ತಿದ್ದಾನೆ ಎನ್ನುವ ಆರೋಪದ ಮೇಲೆ ಜೈಲಿಗೆ ಹಾಕಲು ಪೊಲೀಸರು ಸಜ್ಜಾಗಿದ್ದರು. ಆಗ ಕೆ.ಟಿ. ಗಂಗಾಧರ್ ಬಂದು ನನ್ನನ್ನು ಬಿಡಿಸಿದರು. ನಾನು ಪೊಲೀಸ್ ಠಾಣೆಗೆ ಮತ್ತೆ ಎಂದೂ ಬರುವುದಿಲ್ಲ ಎಂದು ಹೇಳಿ ಅವತ್ತೇ ಊರು ಬಿಟ್ಟು ಮೈಸೂರು ಸೇರಿದೆ. ಅಷ್ಟರಲ್ಲಿ ಪಿ.ಯು.ಸಿ. ಪಾಸಾಗಿದ್ದೆ. ಮೈಸೂರಿಗೆ ಹೋಗಿ ಬಿ.ಎಸ್ಸಿ. ಮಾಡಿದೆ. ಅಲ್ಲಿನ ಕಲಾ ಸಂಪರ್ಕ ನನ್ನನ್ನು ಜೈಲುವಾಸದಿಂದ ಪಾರು ಮಾಡಿತು.

■ ರಾಘವೇಂದ್ರ ಕೆ.